
ಮಾತಾಡಿಕೊಂಡಿದ್ದೆವಾದರೂ ಅವನನ್ನು ನೇರ ಕೇಳಬಾರದೆಂದು ನಿರ್ಧರಿಸಿಕೊಂಡಿದ್ದೆವು. ಇದೆಲ್ಲ ಕೇಳಿ ನಾನು ನನ್ನೊಳಗೆ ನಾನೂ ಕೂಡ ಒಳ್ಳೆಯ ಇಂಗ್ಲಿಷ್ ಕಲಿಯಬೇಕು ಎಂದು ದೃಢಪಡಿಸಿಕೊಂಡಿದ್ದೆ. ಬಾಪುಟ್ಟಿ ಕೂಡ ಸದಾ ನನ್ನನ್ನು ಹುರಿದುಂಬಿಸುವ ಮಾತನ್ನೇ ಆಡುತ್ತಿರುತ್ತಿದ್ದ. ಹಾಗೆ ನಾನು ಓದಿನಲ್ಲಿ ಮುಳುಗುತ್ತ, ನನ್ನ ಆಲೋಚನೆಗಳು ದಿಕ್ಕು ಬದಲಾಗುತ್ತ, ಅತ್ತ ಬಾಪುಟ್ಟಿ ಪ್ರಭಾಳ ಮೇಲಿನ ಪ್ರೇಮದಲ್ಲಿ ಪರಿತಪಿಸುತ್ತಿದ್ದ ಸಮಯದಲ್ಲಿ ನಾನೊಂದು ಕೆಲಸ ಮಾಡಿದೆ. ಅದು ನಮ್ಮೆಲ್ಲರ ಬದುಕನ್ನು ಬದಲಿಸುವಂಥದ್ದಾಗಿತ್ತು. ಆದರೆ ಅದನ್ನು ಮಾಡುವಾಗ ನಿಜಕ್ಕೂ ನನಗೆ ಅದರ ಪರಿಣಾಮದ ಅರಿವೇ ಇರಲಿಲ್ಲ.

ನಾನು ಓದುತ್ತಿದ್ದ ಕಾಲೇಜು ಚೆನ್ನಾಗಿತ್ತು. ಪಟ್ಟಣದ ಚೆಂದ ಚೆಂದನೆ ಹುಡುಗಿಯರು, ಅವರ ಲವಲವಿಕೆಯ ಓಡಾಟ, ಹೆಣ್ಣು ಗಂಡೆನ್ನದೆ ಸಹಜವಾಗಿ ಬೆರೆವ ರೀತಿ, ಕಾಲೇಜಿನಲ್ಲಿದ್ದ ಸುಂದರ ಲೈಬ್ರರಿ, ವಾರವಾರಕ್ಕೂ ನಡೆಯುತ್ತಿದ್ದ ಏನಾದರೊಂದು ಕಲ್ಚರಲ್ ಪ್ರೋಗ್ರಾಂಗಳು... ನಾನು ನಿಧಾನಕ್ಕೆ ಪಟ್ಟಣದ ಬದುಕಿಗೆ ತೆರೆದುಕೊಳ್ಳತೊಡಗಿದ್ದೆ. ದಿನ ನಿತ್ಯ ಪೇಪರೋದುತ್ತಿದ್ದೆ. ಅದರಲ್ಲಿ ಬರುವ ಪ್ರತಿಯೊಂದು ಸಮಾಚಾರವನ್ನೂ ಓದಿ ಮತ್ತೆ ಮನಸಲ್ಲೇ ಆ ಕುರಿತು ಯೋಚಿಸುತ್ತಿದ್ದೆ. ನಮ್ಮ ಸಮಾಜ, ಪರಿಸರ, ಆರೋಗ್ಯ ಇದೆಲ್ಲದರ ಬಗೆ ತೀವ್ರತರ ಕಾಳಜಿಗೆ ಬಿದ್ದೆ. ಇಷ್ಟೆಲ್ಲ ನಿಜಕ್ಕೂ ಬೇಕಿರಲಿಲ್ಲ. ಅಲ್ಪನಿಗೆ ಐಶ್ವರ್ಯ ಬಂದ ಕಥೆಯ ಹಾಗೆ ಇದ್ದಕ್ಕಿದ್ದಂತೆ ನನ್ನೊಳಗೆ ವೀರಾವೇಶ ಹಾಕುತ್ತ ಸದ್‌ಚಿಂತಕನೊಬ್ಬ ಹುಟ್ಟಿಕೊಂಡುಬಿಟ್ಟಿದ್ದ. ಅವನಿಗೆ ತುರ್ತು ಸಮಾಜಸೇವೆ ಮಾಡಬೇಕಿತ್ತು. ಸಮಾಜದಲ್ಲಿ ಬದಲಾವಣೆ ತರುವ ಅಲ್ಪಕಾರ್ಯವಾದರೂ ಅಡ್ಡಿಯಿಲ್ಲ, ಅದು ಮಹಾಕಾರ್ಯವೇ ಆಗುತ್ತದೆ ಅಂದ ನನ್ನೊಳಗಿನ ನವಚಿಂತಕನ ಮಾತಿಗೆ ನನ್ನೊಳಗಿನ ಸಮಾಜ ಸೇವಕ ಹೌದು ಹೌದೆಂದ. ಅದರ ಪರಿಣಾಮವಾಗಿ ನಾನೊಂದು ಕೆಲಸ ಮಾಡಿಬಿಟ್ಟೆ. ಥೇಟ್ ಆಕಾಶಕೆ ಉಗಿದ ಹಾಗೆ.



ನಮ್ಮ ಊರಿನ ಮಾಡುಗುಡ್ಡ, ಗುಡ್ಡದ ಸಕಲಸಂಪದ್ಭರಿತ ಕಾಡು, ಅಲ್ಲಿರುವ ರಕ್ತಚಂದನ, ತೇಗ, ಹೊನ್ನೆ, ನಂದಿ, ಬೀಟೆ, ಶ್ರೀಗಂಧ (ಶ್ರೀಗಂಧ ಇರಬಹುದೆಂಬುದು ನನ್ನ ಕಲ್ಪನೆಯಾಗಿತ್ತು) ಮರಗಳನ್ನೆಲ್ಲ ಹೇಗೆ ಅಲ್ಲಿನ ದೊಡ್ಡ ಕುಳಗಳು ಕಡಿದು ಮಾರಾಟ ಮಾಡುತ್ತಿದ್ದಾರೆ. ಕಾಡಿನ ಹೃದಯ ಭಾಗದಲ್ಲಿ, ಸಂದುಗೊಂದಿಯಲ್ಲಿ ಎಷ್ಟೆಷ್ಟು ಗಾಂಜಾ ಬೆಳೆಯಲಾಗುತ್ತಿದ್ದೆ ಎಂಬುವುದನ್ನೆಲ್ಲ ಆದಷ್ಟು ವಿಷದವಾಗಿ ಬರೆದು, ಇಲ್ಲಿ ಗಾಂಜಾದ ಕುರಿತು ಊರವರು ಆಡಿಕೊಂಡ ಮಾತಿನ ಆಧಾರವನ್ನಿಟ್ಟುಕೊಂಡು ಬರೆದಿದ್ದೆ. ಅಲ್ಲಿಂದ ಹೇಗೆ ಸಂಪನ್ಮೂಲಗಳು ಕೇರಳದ ಕಡೆಗೂ ರವಾನೆಯಾಗುತ್ತಿರಬಹುದು ಎಂಬುದರ ಕುರಿತು ಸಂದೇಹವೆತ್ತಿ, ಕಾಡುಪ್ರಾಣಿಗಳ ನಿರಂತರ ಬೇಟೆಯಿಂದಾಗಿ ಪರಿಸರ ಸಮತೋಲನ ಹೇಗೆ ಹದಗೆಡಬಹುದೆಂದು ವಿಷಾದ ವ್ಯಕ್ತಪಡಿಸುತ್ತ, ಈ ಪ್ರದೇಶವನ್ನೇಕೆ ಸರಕಾರ ಸರಕಾರೀ ಜಮೀನೆಂದು ಘೋಷಿಸಬಾರದು? ಒಂದುವೇಳೆ ಘೋಷಿತ ಸರಕಾರಿ ಅರಣ್ಯವೇ ಆಗಿದ್ದರೆ ಯಾಕೆ ಇದರ ರಕ್ಷಣೆ ಆಗುತ್ತಿಲ್ಲ. ಇದರಲ್ಲಿ ಅರಣ್ಯ ಇಲಾಖೆ ಮತ್ತು ಪೊಲೀಸ್ ಇಲಾಖೆಯ ಎಲ್ಲರೂ ಶಾಮೀಲೆ? ಧನಿಕರು ಮಾಡುವ ಅರಾಜಕತೆಗೆ ಉತ್ತರ ಇಲ್ಲವೆ? ಹಾಗೆ ಹೀಗೆ... ಭಗವಂತ! ಆವೇಶದಿಂದ ಏನೆಲ್ಲ ಬರೆದು ಅಷ್ಟೇ ಆವೇಶದಿಂದ ಎರಡ್ಮೂರು ಪೇಪರಿನವರಿಗೆ, ಎಸ್ಪಿಗೆ, ಡಿಸಿಗೆ ಅಂತೆಲ್ಲ ಅಡ್ರೆಸ್ ಬರೆದು